ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಬಗೆ ನೀ ಅನಿಕೇತನ
BE BOUNDLESS

BENGALURU CITY UNIVERSITY

Office of the Registrar(Evaluation), Jnana Jyothi Central College Campus, Dr. B.R AmbedkarVeedhi, Bengaluru – 560 001.E-mail: registrarevlubcu@gmail.com, regev@bcu.ac.in Ph.No.080-22295559/29572003

ಸಂಖ್ಯೆ:ಬೆಂ.ನ.ವಿ/ಪ.ವಿ/01/2024-25/019

ದಿನಾಂಕ:08.04.2025

## ಸುತ್ತೋಲೆ

ವಿಷಯ:2024-25ನೇ ಸಾಲಿನ ವಾಣಿಜ್ಯ ಮತ್ತು ನಿರ್ವಹಣಾ ವಿಷಯಗಳ 1ನೇ ಮತ್ತು 3ನೇ ಸೆಮಿಸ್ಟರ್ (ಫ್ರೆಷರ್ಸ್ &ರಿಪೀಟರ್ಸ್) ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಕ್ಕೆ ಅಧ್ಯಾಪಕರನ್ನು ಕಡ್ಡಾಯವಾಗಿ ಕಳುಹಿಸಿಕೊಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜನವರಿ/ಫೆಬ್ರವರಿ-2025ನಲ್ಲಿ ನಡೆದಿರುವ ವಾಣಿಜ್ಯ ಮತ್ತು ನಿರ್ವಹಣಾ ವಿಷಯಗಳ 1ನೇ ಮತ್ತು 3ನೇ ಸೆಮಿಸ್ಟರ್ (ಫ್ರೆಷರ್ಸ್ &ರಿಪೀಟರ್ಸ್) ಪರೀಕ್ಷೆಗಳ ಮೌಲ್ಯಮಾಪನ ಕಾರ್ಯ ಆರಂಭಿಸಿ ಶೀಘ್ರವಾಗಿ ಫಲಿತಾಂಶಗಳನ್ನು ಪ್ರಕಟಿಸಬೇಕಿದೆ.

ದಿನಾಂಕ 08.04.2025 ರಿಂದ ಮೌಲ್ಯಮಾಪನ ಕಾರ್ಯ ಆರಂಭವಾಗಿದ್ದು, ವಾಣಿಜ್ಯ (ಕೋರ್ಸುಗಳ ಉತ್ತರ ಪತ್ರಿಕೆಗಳು (Answer Scripts) ಹೆಚ್ಚಿರುವುದರಿಂದ ಎಲ್ಲಾ ಅರ್ಹ ಅಧ್ಯಾಪಕರು ಕಡ್ಡಾಯವಾಗಿ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ನಿರ್ದೇಶನ ನೀಡಬೇಕೆಂದು/ ಸೂಚಿಸಬೇಕೆಂದು ಕೋರಲಾಗಿದೆ. ವಾಣಿಜ್ಯ ಮತ್ತು ನಿರ್ವಹಣಾ 1ನೇ ಮತ್ತು 3ನೇ ಸೆಮಿಸ್ಟರ್ (ಫ್ರೆಷರ್ಸ್ &ರಿಪೀಟರ್ಸ್) ಪರೀಕ್ಷೆಗಳ ಮೌಲ್ಯಮಾಪನ ಕಾರ್ಯವು ಪರೀಕ್ಷಾ ವಿಭಾಗ, ನ್ಯಾಚುರಲ್ ಕಟ್ಟಡ (Stone Building),ಸೆಂಟ್ರಲ್ ಕಾಲೇಜ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ ನಡೆಯುತ್ತಿದ್ದು, ಆಯಾ ವಿಷಯಗಳ ಮೌಲ್ಯಮಾಪಕರು ತಪ್ಪದೇ ಹಾಜರಾಗಿ ವಿದ್ಯಾರ್ಥಿಗಳ ಮತ್ತು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕೆಂದು ಕೋರಲಾಗಿದೆ. ಯಾವ ಕಾಲೇಜುಗಳಿಂದ ಅಧ್ಯಾಪಕರು ಮೌಲ್ಯಮಾಪನ ಕಾರ್ಯ ನಿರ್ವಹಿಸಲು ಬರದೇ ಇರುವ ಕಾಲೇಜಿನ ಫಲಿತಾಂಶವನ್ನು ಪ್ರಕಟಿಸಲಾಗುವುದಿಲ್ಲ.

KSU Act 2000 Section 73,74 & 75 ಮತ್ತು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕೈಪಿಡಿ 2018ರ ಪ್ರಕಾರ, ಪರೀಕ್ಷೆಯ ಕೆಲಸ ಕಡ್ಡಾಯವಾಗಿದ್ದು, ಎಲ್ಲಾ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ಸೂಚಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ.

ಮೌಲ್ಯಮಾಪನ ಮಾಡುವಾಗ ಕೆಲವು ಮೌಲ್ಯಮಾಪಕರು ಮೊಬೈಲ್‌ನಲ್ಲಿ ಮಾತನಾಡುವುದುದನ್ನು ಸಾರ್ವಜನಿಕರು ಮತ್ತು R.T.I ಕಾರ್ಯಕರ್ತರು ಗಮನಿಸಿ, ವಿಶ್ವವಿದ್ಯಾನಿಲಯದ ಗಮನಕ್ಕೆ ತಂದಿರುತ್ತಾರೆ. ಈ ವಿಚಾರವನ್ನು ಸಂಭಂದಪಟ್ಟ ಮುಖ್ಯ ಸಂಯೋಜನಾಧಿಕಾರಿಗಳ ಗಮನಕ್ಕೆ ತಂದು ಇದನ್ನು ಗಮನಿಸಿ ಸೂಕ್ತ ಎಚ್ಚರಿಕೆ ನೀಡುವಂತೆ ತಿಳಿಸಲಾಗಿದೆ. ಈ ರೀತಿ ಮೌಲ್ಯಮಾಪನ ಸಮಯದಲ್ಲಿ ಮೊಬೈಲ್ ಉಪಯೋಗಿಸುವುದನ್ನು ನಿಲ್ಲಿಸಬೇಕೆಂದು ತಮ್ಮ ಕಾಲೇಜುಗಳ ಮೌಲ್ಯಮಾಪಕರಿಗೆ ಸೂಚಿಸಲು ಸಹ ಕೋರಲಾಗಿದೆ.

ಆದುದರಿಂದ, ದಯಮಾಡಿ ತಾವು ಈ ವಿಚಾರದಲ್ಲಿ ಸಕ್ರಿಯ ಸಹಕಾರ ನೀಡಬೇಕೆಂದು ಕೋರಿದೆ.

8/4

ಕುಲಸಚಿವರು(ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001